# ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

9ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು-01.

**ದಿನಾಂಕ: 18.09.2014ರಂದು ಬೆಳಗ್ಗೆ 11.00ಗಂಟೆಗೆ ಡಾ: ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಬೆಂಗಳೂರು ಇಲ್ಲಿ ನಡೆದ ನಿಗಮದ 200ನೇ ನಿರ್ದೇಶಕರ ಮಂಡಳಿಯ ನಡವಳಿಗಳು**

**ಹಾಜರಾತಿ**

| ಹೆಸರು ಮತ್ತು ಪದನಾಮ | |
|---|---|
| ಶ್ರೀ ಹೆಚ್.ಆಂಜನೇಯ,<br>ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಹಾಗೂ ಮಾನ್ಯ ಅಧ್ಯಕ್ಷರು,<br>ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ | ಅಧ್ಯಕ್ಷರು |
| ಶ್ರೀ ಎನ್. ಮಂಜುನಾಥ್ ಪ್ರಸಾದ್, ಭಾ.ಆ.ಸೇ.,<br>ಸರ್ಕಾರದ ಕಾರ್ಯದರ್ಶಿಗಳು,<br>ಸಮಾಜ ಕಲ್ಯಾಣ ಇಲಾಖೆ,<br>ಕರ್ನಾಟಕ ಸರ್ಕಾರ | ಸದಸ್ಯರು |
| ಶ್ರೀ. ಎಸ್.ಎನ್.ಜಯರಾಂ, ಭಾ.ಆ.ಸೇ.,<br>ಆಯುಕ್ತರು,<br>ಸಮಾಜ ಕಲ್ಯಾಣ ಇಲಾಖೆ, | ಸದಸ್ಯರು |
| ಶ್ರೀ.ಕೆ.ಸಿ.ಶ್ರೀರಾಮಯ್ಯ, ಕ.ಆ.ಸೇ.,<br>ವ್ಯವಸ್ಥಾಪಕ ನಿರ್ದೇಶಕರು<br>ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ | ಸದಸ್ಯ ಕಾರ್ಯದರ್ಶಿಗಳು |
| ಶ್ರೀಮತಿ ಎಲ್. ರಾಜೇಶ್ವರಿ<br>ಉಪ ಕಾರ್ಯದರ್ಶಿಗಳು,<br>ಸಾರ್ವಜನಿಕ ಉದ್ದಿಮೆಗಳ ಇಲಾಖೆ | ಸದಸ್ಯರು |

**ಗೈರು ಹಾಜರಿ:**

| | |
|---|---|
| ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು<br>ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮ, ಭಾರತ ಸರ್ಕಾರ, ನವದೆಹಲಿ, | ಸದಸ್ಯರು |
| ನಿರ್ದೇಶಕರು,<br>ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ,<br>ಭಾರತ ಸರ್ಕಾರ, ನವದೆಹಲಿ | ಸದಸ್ಯರು |
| ಶ್ರೀ ಹೀರಾನಾಯಕ್, ಕೆ.ಎ.ಎಸ್.(ಎಸ್‌ಟಿಎಸ್)<br>ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ | ಸದಸ್ಯರು |
| ಶ್ರೀ ರಾಮಚಂದ್ರಯ್ಯ,<br>ಸರ್ಕಾರದ ಉಪ ಕಾರ್ಯದರ್ಶಿಗಳು,<br>ಆರ್ಥಿಕ ಇಲಾಖೆ, | ಸದಸ್ಯರು |

ನಿಗಮದ ವ್ಯವಸ್ಥಾಪಕ ನಿರ್ದೇಶಕರವರು ನಿರ್ದೇಶಕರ ಮಂಡಳಿಯ ಅಧ್ಯಕ್ಷರೂ ಆದ ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರನ್ನು ಮತ್ತು ಹೊಸದಾಗಿ ನಿಗಮದ ನಿರ್ದೇಶಕರ ಮಂಡಳಿಯ ಸದಸ್ಯರಾಗಿ ನೇಮಕವಾಗಿರುವ ಶ್ರೀ.ಎನ್.ಮಂಜುನಾಥ್ ಪ್ರಸಾದ್, ಭಾ.ಆ.ಸೇ.ರವರನ್ನು ವಿಶೇಷವಾಗಿ ಸಭೆಗೆ ಸ್ವಾಗತಿಸಿದರು. ಹಿಂದಿನ ನಿಗಮದ ನಿರ್ದೇಶಕ ಮಂಡಳಿಯ ಸದಸ್ಯರಾಗಿ ಶ್ರೀ ಎಂ.ಆರ್.ಕಾಂಬ್ಳೆ, ಭಾ.ಆ.ಸೇ ಹಾಗೂ ಸದಸ್ಯ ಕಾರ್ಯದರ್ಶಿಗಳಾಗಿ ಡಾ.ಆರ್.ರಾಜು,ಭಾ.ಅ.ಸೇರವರು ಸಲ್ಲಿಸಿದ ಸೇವೆಯನ್ನು ಶ್ಲಾಘಿಸಲಾಯಿತು. ಸಮಾಜ ಕಲ್ಯಾಣ ಇಲಾಖೆಯ ಮಾನ್ಯ ಸರ್ಕಾರದ ಕಾರ್ಯದರ್ಶಿಗಳಾದ ಶ್ರೀ.ಎನ್.ಮಂಜುನಾಥ್ ಪ್ರಸಾದ್, ಭಾ.ಆ.ಸೇ.ರವರು ನಿರ್ದೇಶಕರ ಮಂಡಳಿಯ ಪದನಿಮಿತ್ತ ನೂತನ ಸದಸ್ಯರಾಗಿರುವುದನ್ನು ಹಾಗೂ ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ.ಕೆ.ಸಿ.ಶ್ರೀರಾಮಯ್ಯ, ಕ.ಆ.ಸೇ. ಇವರು ನಿರ್ದೇಶಕರ ಮಂಡಳಿಯ ನೂತನ ಸದಸ್ಯ ಕಾರ್ಯದರ್ಶಿಗಳಾಗಿರುವುದನ್ನು ದಾಖಲಿಸಲಾಯಿತು. ವ್ಯವಸ್ಥಾಪಕ ನಿರ್ದೇಶಕರು ಸಭೆಗೆ ಅಗತ್ಯ ಕೋರಂ ಇರುವುದನ್ನು ಖಚಿತಪಡಿಸಿಕೊಂಡು, 200ನೇ ಆಡಳಿತ ಮಂಡಳಿಯ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಸಭೆಯನ್ನು ನಡೆಸಿಕೊಡಬೇಕೆಂದು ನಿಗಮದ ಅಧ್ಯಕ್ಷರೂ ಆದ ಮಾನ್ಯ ಸಚಿವರನ್ನು ಕೋರಿದರು. ಹಾಗೂ ಸಭೆಯಲ್ಲಿ ಹಾಜರಿರುವ ನಿರ್ದೇಶಕರ ಮಂಡಳಿಯ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು.

ನಿರ್ದೇಶಕರ ಮಂಡಳಿಯಲ್ಲಿ ಆಗುವ ಯಾವುದೇ ಬದಲಾವಣೆಗೆಸಂಬಂಧಿಸಿದಂತೆ ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯದೊಡನೆ ವ್ಯವಹರಿಸಲು ನಿಗಮದ ವ್ಯವಸ್ಥಾಪಕ ನಿರ್ದೇಶಕರು ಅಥವಾ ನಿರ್ದೇಶಕರ ಮಂಡಳಿಯ ಒಬ್ಬರು ಸದಸ್ಯರಿಗೆ ಪ್ರಾಧಿಕಾರ ನೀಡಿ ಅನುಮೋದಿಸಿತು

**ವಿಷಯ ಸಂಖ್ಯೆ: 1 : 199ನೇ ನಿರ್ದೇಶಕರ ಮಂಡಳಿ ಸಭೆಯ ನಡವಳಿಗಳನ್ನು ಅನುಮೋದಿಸುವ ಕುರಿತು**

ದಿನಾಂಕ:14.07.2014ರಂದು ನಡೆದ 199ನೇ ನಿರ್ದೇಶಕರ ಮಂಡಳಿಯು ತೆಗೆದುಕೊಂಡ ವಿಷಯವಾರು ತೀರ್ಮಾನದ ನಡವಳಿಯನ್ನು ಸರ್ವ ಸದಸ್ಯರಿಗೂ ಕಳುಹಿಸಲಾಗಿತ್ತು. ಯಾವುದೇ ಸದಸ್ಯರುಗಳಿಂದ ಸದರಿ ನಡವಳಿಯ ಬಗ್ಗೆ ವೈಯಕ್ತಿಕ ಅಭಿಪ್ರಾಯಗಳು ಬಾರದ ಪ್ರಯುಕ್ತ ಸಭೆಯು ಸದರಿ ನಡವಳಿಯನ್ನು ಯಥಾವತ್ತಾಗಿ ಅಂಗೀಕರಿಸಿತು.

**ವಿಷಯ ಸಂಖ್ಯೆ: 2 : 199ನೇ ನಿರ್ದೇಶಕರ ಮಂಡಳಿ ಸಭೆಯ ನಡವಳಿಗಳ ಮೇಲೆ ಕೈಗೊಂಡ ಅನುಸರಣಾ ವರದಿ**

199ನೇ ಆಡಳಿತ ಮಂಡಳಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಜರುಗಿಸಿದ ಕ್ರಮದ ಬಗ್ಗೆ ಸಭೆಯು ಪರಿಶೀಲಿಸಿ, ಅನುಮೋದನೆ ನೀಡಿತು.

**ವಿಷಯ ಸಂಖ್ಯೆ: 3 : 2013-14ನೇ ಹಣಕಾಸು ವರ್ಷದ ವಾರ್ಷಿಕ ಲೆಕ್ಕಗಳನ್ನು ಅನುಮೋದಿಸುವ ಬಗ್ಗೆ**

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು 31.03.2014ರ ಅಂತ್ಯಕ್ಕೆ ಕೊನೆಗೊಂಡ ನಿಗಮದ ಕರಡು ಬ್ಯಾಲೆನ್ಸ್ ಶೀಟ್‌ನ್ನು ಹಾಗೂ ಲಾಭ ಮತ್ತು ನಷ್ಟದ ತಖ್ತೆ:ಯನ್ನು ಸಭೆಗೆ ಮಂಡಿಸಿದರು. ನಿರ್ದೇಶಕರ ಮಂಡಳಿ ಸಭೆಯು ಪರಿಶೀಲಿಸಿ, ಹಣಕಾಸು ತಃಖ್ತೆಗಳಿಗೆ ನಿರ್ದೇಶಕರ ಮಂಡಳಿಯ ಪರವಾಗಿ ನಿಗಮದ ವ್ಯವಸ್ಥಾಪಕ ನಿರ್ದೇಶಕರು, ನಿರ್ದೇಶಕ ಮಂಡಳಿಯ ಒಬ್ಬರು ನಿರ್ದೇಶಕರು ಹಾಗೂ ಪ್ರಧಾನ ವ್ಯವಸ್ಥಾಪಕರು(ಹಣಕಾಸು) ಇವರು ಸಹಿ ಮಾಡಿ ಲೆಕ್ಕಪರಿಶೋಧಕರಿಗೆ ಸಲ್ಲಿಸಿ ವರದಿ ಪಡೆಯಲು ಪ್ರಾಧಿಕಾರ ನೀಡಿ ನಿರ್ಣಯ ಕೈಗೊಂಡಿತು.

"RESOLVED THAT the Balance Sheet as at 31st March 2014, Profit & Loss account and cash flow statement for the year 31st March, 2014 be and is hereby approved and that the Managing Director, the Chairman/ or any one of the Director of the Corporation along with the General Manager Finance be and are hereby authorized to sign the Balance Sheet and Profit & Loss Account for the year ending 31st March 2014 on behalf of the Board and that the signed Balance Sheet and Profit & Loss Account be presented to the Auditors for the report thereon".

**ವಿಷಯ ಸಂಖ್ಯೆ: 4 : ನಿಗಮದ 2013-14ನೇ ಹಣಕಾಸು ವರ್ಷದ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು ಕಾಲ ಮಿತಿಯನ್ನು ಕಂಪನಿಗಳ ಅಧಿನಿಯಮ,2013ರ ವಿಧಿ96(1)ರ ಅನ್ವಯ ವಿಸ್ತರಿಸಲು ಕಂಪನಿಗಳ ನೊಂದಣಾಧಿಕಾರಿಗಳು, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಕರ್ನಾಟಕರವರಿಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಅರ್ಜಿ ಸಲ್ಲಿಸಲು ಪ್ರಾಧಿಕಾರ ನೀಡುವ ಬಗ್ಗೆ.**

ವ್ಯವಸ್ಥಾಪಕ ನಿರ್ದೇಶಕರು ನಿಗಮದ ವಾರ್ಷಿಕ ಸಾಮಾನ್ಯ ಸಭೆಯನ್ನು ಸೆಪ್ಟೆಂಬರ್ ಅಂತ್ಯದೊಳಗೆ ಕರೆಯಲು ಅನಿವಾರ್ಯ ಕಾರಣಗಳಿಂದ ಸಾಧ್ಯವಾಗುತ್ತಿಲ್ಲವಾದ್ದರಿಂದ, ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು ಕಾಲ ಮಿತಿಯನ್ನು ಕಂಪನಿಗಳ ಅಧಿನಿಯಮ,2013ರ ವಿಧಿ96(1)ರ ಅನ್ವಯ ವಿಸ್ತರಿಸಲು ಕಂಪನಿಗಳ ನೊಂದಣಾಧಿಕಾರಿಗಳು, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಕರ್ನಾಟಕರವರಿಗೆ ಅರ್ಜಿ ಸಲ್ಲಿಸಲು ಅನುಮತಿ ನೀಡುವಂತೆ ಸಭೆಯನ್ನು ಕೋರಿದರು. ಈ ಬಗ್ಗೆ ಪರಿಶೀಲಿಸಿದ ನಿರ್ದೇಶಕ ಮಂಡಳಿಯ ಸಭೆಯು ಈ ಬಗ್ಗೆ ಅಗತ್ಯ ಕ್ರಮ ವಹಿಸಲು ವ್ಯವಸ್ಥಾಪಕ ನಿರ್ದೇಶಕರಿಗೆ ಪ್ರಾಧಿಕಾರ ನೀಡಿ ನಿರ್ಣಯಿಸಿತು.

"RESOLVED to seek extension of time under the provisions of sub-section (1) of Section 96 of the Companies Act, 2013 for holding the 39th Annual General Meeting of the Corporation after 30th September 2014 and before 31st December 2014 and that the Managing Director be and is hereby authorised to make necessary application to the Registrar of Companies, Karnataka, Ministry of Corporate Affairs and to take such other action as may be deemed necessary in this regard".

**ಕಾರ್ಯಸೂಚಿಯ ಕ್ರ.ಸಂ.5 ರಿಂದ 25ರವರೆಗಿನ ವಿಷಯಗಳನ್ನು ಮುಂದೂಡುತ್ತಾ ಮುಂದಿನ ನಿರ್ದೇಶಕ ಮಂಡಳಿ ಸಭೆಗೆ ಮಂಡಿಸಲು ತೀರ್ಮಾನಿಸಲಾಯಿತು.**

ವ್ಯವಸ್ಥಾಪಕ ನಿರ್ದೇಶಕರು ಮಾನ್ಯ ಅಧ್ಯಕ್ಷರಿಗೆ ಹಾಗೂ ಎಲ್ಲಾ ಸದಸ್ಯರಿಗೆ ವಂದನೆಗಳನ್ನು ಸಲ್ಲಿಸುವುದರೊಂದಿಗೆ ನಿರ್ದೇಶಕ ಮಂಡಳಿಯು ಸಭೆಯನ್ನು ಮುಕ್ತಾಯ ಮಾಡಲಾಯಿತು.

(ಕೆ.ಸಿ.ಶ್ರೀರಾಮಯ್ಯ)
ವ್ಯವಸ್ಥಾಪಕ ನಿರ್ದೇಶಕರು
ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ(ನಿ)

(ಹೆಚ್. ಆಂಜನೇಯ)
ಅಧ್ಯಕ್ಷರು
ಡಾ:ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ (ನಿ) ಮತ್ತು
ಸಮಾಜ ಕಲ್ಯಾಣ ಮತ್ತು ಹಿಂದುಳಿದ ಕಲ್ಯಾಣ ಸಚಿವರು
ಕರ್ನಾಟಕ ಸರ್ಕಾರ